**ಕನ್ನಡದಲ್ಲಿ ತಮ್ಮ ಕಾದಂಬರಿಗಳ ಮೂಲಕ ತಲೆಮಾರುಗಳ ಓದಿನ ಅಭಿರುಚಿಯನ್ನು ಬೆಳೆಸಿದ ಲೇಖಕ ತ.ರಾ.ಸು. (ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್; 1920 – 1984) ಅವರು ಹುಟ್ಟಿ ನೂರು ವರ್ಷಗಳು ಕಳೆದಿವೆ. ಬದುಕಿದ್ದಾಗ ಸ್ಟಾರ್ ಲೇಖಕರಾಗಿದ್ದ ತ.ರಾಸು. ಅವರಿಗಿದ್ದ ಜನಪ್ರಿಯತೆಯನ್ನು ಈಗ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಬರೆದೇ ಬದುಕಿದ ತ.ರಾ.ಸು. ಅವರ ಕಾದಂಬರಿಗಳು, ಅವನ್ನು ಆಧರಿಸಿ ಮಾಡಿದ ಸಿನಿಮಾಗಳ ಕುರಿತ ಅವಲೋಕನ ಇಲ್ಲಿದೆ.**

(ಚಿತ್ರ ಕೃಪೆ: ಡಿ.ಸಿ. ನಾಗೇಶ್)

'ಮದಕರಿ ಎಂದರೆ ಚಿತ್ರದುರ್ಗ, ಚಿತ್ರದುರ್ಗವೆಂದರೆ ಮದಕರಿ' ಎಂದು ತ.ರಾ.ಸು. ಅನೇಕ ಸಲ ಸ್ಮರಿಸಿದರೆ, ತ.ರಾ.ಸು. ಅಂದರೆ ಚಿತ್ರದುರ್ಗ ಚಿತ್ರದುರ್ಗವೆಂದರೆ ತ.ರಾ.ಸು. ಅಂತೆಲ್ಲಾ ದುರ್ಗದ ಜನ ಅಭಿಮಾನಿಸುತ್ತಾರೆ. ಅವರು ಜನಿಸಿದ್ದು (21–04–1920) ಮಲೆಬೆನ್ನೂರಿನಲ್ಲಿ (ಹರಿಹರ ತಾಲ್ಲೂಕು). ಬೆಳೆದದ್ದು ತಳಕಿನಲಿ, ಇಂಟರ್‌ಮಿಡಿಯಟ್ ಓದಿದ್ದು ಚಿತ್ರದುರ್ಗದಲ್ಲಿ. ನೆಲೆನಿಂತಿದ್ದು ದೂರದ ಮೈಸೂರಿನಲ್ಲಿ. ಆದರೆ, ದುರ್ಗದ ಇತಿಹಾಸ ಕುರಿತು ಬರೆದ ಸಾಲು ಸಾಲು ಕಾದಂಬರಿಗಳಿಂದಾಗಿ ದುರ್ಗದವರ ಹೃದಯಕ್ಕೆ ತುಂಬಾ ಹತ್ತಿರವಾದರು. ದುರ್ಗದವರ ಆದರಾಭಿಮಾನವನ್ನು ಸೂರೆಗೊಂಡ ಬರಹಗಾರ ತ.ರಾ.ಸು. ಇವರನ್ನು ಸ್ಮರಿಸುವಾಗ ಜೊತೆಗೆ ದುರ್ಗದ ಖ್ಯಾತ ಇತಿಹಾಸ ಸಂಶೋಧಕರಾದ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಸ್ಮರಿಸಲೇಬೇಕು. ಅವರು ದುರ್ಗದ ಕೋಟೆ ಕೊತ್ತಲಗಳನ್ನು ಸುತ್ತಿ ತಾಳೆಗರಿ, ತಾಮ್ರಪತ್ರ, ಶಾಸನಗಳನ್ನು ಅಭ್ಯಸಿಸಿ, ಹಿರಿಯರಿಂದ ಸಂಗ್ರಹಿಸಿ ಪಾಳೇಗಾರರ ಬಗ್ಗೆ ಚಾರಿತ್ರಿಕ ಅಂಶಗಳನ್ನು ದಾಖಲೆ ಸಮೇತ ಬರೆದಿಡದೆ ಹೋಗಿದ್ದರೆ, ತ.ರಾ.ಸು. ಅವರಾಗಲಿ, ನಾನಾಗಲಿ ಪಾಳೇಗಾರರ ಕುರಿತು ಕಾದಂಬರಿಗಳನ್ನು ರಚಿಸಲು ಸಾಧ್ಯವಾಗುತ್ತಿರಲಿಲ್ಲವೇನೊ. ಇತ್ತೀಚೆಗೆ ಸಂಶೋಧಕ ಲಕ್ಷ್ಮಣ ತೆಲಗಾವಿ ಜೋಯಿಸರ ಕಾರ್ಯವನ್ನು ಮುಂದುವರೆಸುತ್ತಿದ್ದಾರೆ. ತೆಲಗಾವಿ ತಲಸ್ಪರ್ಶಿ ಅಧ್ಯಯನ ನಿರತ ಸಂಶೋಧಕರು.

ದುರ್ಗದ ಸಾಹಿತ್ಯದ ವಿಷಯಕ್ಕೆ ಬಂದರೆ ಒಂದು ತಳುಕಿನ ಕುಟುಂಬ ಮತ್ತೊಂದು ಬೆಳಗೆರೆ ಕುಟುಂಬದವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಬೆಳಗೆರೆ ಕೃಷ್ಣಶಾಸ್ತ್ರಿಗಳು, ಬೆಳಗೆರೆ ಜಾನಕಮ್ಮ, ಸೀತಾರಾಮ ಶಾಸ್ತ್ರಿಗಳು ಹಾಗೂ ತಳಕಿನ ವೆಂಕಣ್ಣಯ್ಯ, ತ.ಸು. ಶಾಮರಾಯರು, ತ.ರಾ. ಸುಬ್ಬರಾಯರು ಇವರೆಲ್ಲಾ ತಮ್ಮ ಆಳವಾದ ಅಧ್ಯಯನ, ಸಾಹಿತ್ಯ ಕೃಷಿಯಿಂದಾಗಿ ಇಂದಿಗೂ ಅಜರಾಮರರು ಹಾಗೂ ಪ್ರಾತಃಸ್ಮರಣೀಯರು. ಐತಿಹಾಸಿಕ ಕಾದಂಬರಿಗಳ ರಚನೆಯಿಂದಾಗಿ ತ.ರಾ.ಸು. ಇವರೆಲ್ಲರಿಗಿಂತಲೂ ಹೆಚ್ಚು ಜನಪ್ರಿಯರು; ಸಮಕಾಲೀನ ಐತಿಹಾಸಿಕ ಕಾದಂಬರಿಕಾರರಾದ ಗಳಗನಾಥ, ದೇವುಡು, ಕೆ.ವಿ. ಅಯ್ಯರ್, ಮಾಸ್ತಿ ಇವರೆಲ್ಲರಿಗಿಂತಲೂ ತ.ರಾ.ಸು. ಹೆಚ್ಚು ಖ್ಯಾತನಾಮರು. 'ಗುರುವಿನ ಮಿಂಚಿನ ಶಿಷ್ಯರು' ಮಾದರಿ ಬೆಳೆದವರು. ಬರಹಗಾರರಷ್ಟೇ ಅಲ್ಲ, ಅ.ನ. ಕೃಷ್ಣರಾಯರ ಗರಡಿಯಲ್ಲಿ ಪಳಗಿದ ತ.ರಾ.ಸು. ಪತ್ರಕರ್ತರಾಗಿಯೂ ದುಡಿದವರು. ಸ್ವಾತಂತ್ರ್ಯ ಹೋರಾಟದಲ್ಲೂ ಕನ್ನಡ ಚಳವಳಿಯಲ್ಲೂ ಮುಂಚೂಣಿಯಲ್ಲಿದ್ದ ತ.ರಾ.ಸು. ಪ್ರಗತಿಶೀಲ ಬರಹಗಾರ. ಬರಹವನ್ನೇ ಬದುಕನ್ನಾಗಿ ಮಾಡಿಕೊಂಡು ಬರೆದು ಗೆದ್ದ ಅಪರೂಪದ ಸಾಹಸಿ ಬರಹಗಾರ. ಬದುಕಿಗಾಗಿಯೇ ಬರೆದಿದ್ದರಿಂದಲೋ ಏನೋ ಅನಿಸಿದ್ದು,